ಆಕೆ ಸ್ಪೂನ್‌ನಿಂದ ಗ್ಲಾಸ್‌ನಲ್ಲಿದ್ದ ಟೀ ತೆಗೆದುಕೊಂಡು ಕುಡಿದು ನೋಡಿದರು. ಆಕೆಯ ಮುಖ ಸೊಟ್ಟಗಾಗಿಯಿತು; ಆಕೆ ಕರೆದಳು, 'ನಳಿನಿ'.

ತನ್ನ ಪಾವಾಡೆಗೆ ಒದ್ದೆ ಕೈಯನ್ನು ಒರೆಸುತ್ತಾ ನಳಿನಿ ಅಡಿಗೆಮನೆಯಿಂದ ಬಂದಳು. ಆಕೆ ಕೇಳಿದಳು, 'ನೀನು ಇದರಲ್ಲಿ ಸಕ್ಕರೆ ಹಾಕಲಿಲ್ಲವೇ?'

ಅವಳು ಸ್ವಲ್ಪ ಯೋಚಿಸಿ ತಾನು ತಪ್ಪು ಮಾಡಿದ್ದು ಜ್ಞಾಪಕಕ್ಕೆ ಬಂದು ತಲೆ ತಗ್ಗಿಸಿದಳು. ಅವಳ ಮುಖದಲ್ಲಿ ಬೆವರಿನ ಹನಿಗಳು ಮೂಡಿದವು. ಆಕೆ ಕೇಳಿದಳು, 'ಏನು ಮರೆವೆ ನಿನಗೆ?'

ಅಡಿಗೆ ಮನೆಗೆ ಹೋಗಿ ಸಕ್ಕರೆ ಹಾಕಿ ಟೀ ಮರಳಿ ತಂದು ಆಕೆ ಅಪ್ಪಾವ್ರನ್ನು ಕೇಳಿದಳು, 'ಟೀ ತಣ್ಣಗಾಗಿ ಹೋಯಿತು. ಬಿಸಿ ಮಾಡಿ ತರಲೇ?'

'ಬೇಡ' ಕಿಟಕಿಯ ಹೊರಗೆ ನೋಡುತ್ತಾ ನಿಂತು ಅಪ್ಪ ಹೇಳಿದರು.

'ಇದನ್ನು ಕುಡಿಯಿರಿ.'

'ನಾನು ಕುಡಿದುಕೊಳ್ಳುತ್ತೇನೆಂದು ಹೇಳಲಿಲ್ಲವೇ' ಚುಟ್ಟದ ತುದಿಯಿಂದ ಬೂದಿ ಕೊಡುವುತ್ತಾ ಅಪ್ಪಾವ್ರು ಹೇಳಿದರು.

ಸಕ್ಕರೆ ಹಾಕಿದ, ತಣ್ಣಗಾಗ ತೊಡಗಿದ ಟೀ ಮೇಜಿನ ಮೇಲೆ ಹಾಗೇ ಇತ್ತು. ಅಪ್ಪಾವ್ರು ಮತ್ತೆ ಚುಟ್ಟ ಹತ್ತಿಸಿ ಕಿಟಕಿಯ ಬಳಿ ನಿಂತು ಹೊರಗೆ ನೋಡುತ್ತಾ ನಿಂತರು. ಎಷ್ಟು ಹೇಳಿದರೂ ಅದನ್ನು ಕೇಳಲು ಆತ ತಯಾರಿರಲಿಲ್ಲ. ಇನ್ನೊಂದು ಸಲ ಜ್ಞಾಪಿಸಿದಾಗ ಅಪ್ಪಾವ್ರು ಹೇಳಿದರು.

'ನೀನು ಯಾಕೆ ತೊಂದರೆ ತೆಗೆದುಕೊಳ್ಳುತ್ತೀ? ನನಗಿಷ್ಟ ಬಂದಾಗ ನಾನು ಕುಡಿಯುತ್ತೇನೆ.'

'ಹೀಗೇಕೆ ಹಟ ಮಾಡುತ್ತೀರಿ? ಅವಳು ಸಕ್ಕರೆ ಹಾಕಲು ಮರೆತು ಹೋದಳಲ್ಲವೇ?' ಆಕೆ ದುಃಖದಿಂದ ಹೇಳಿದಳು.

ಅಪ್ಪಾವ್ರು ಮಾತನಾಡಲಿಲ್ಲ. ಟೀ ಕೈಯಲ್ಲಿತ್ತು. ಆಕೆ ಕೇಳಿದಳು, 'ಇದನ್ನು ಕುಡಿಯುವುದಿಲ್ಲವೇ?'

ಟೀಯನ್ನು ನೋಡದೆ ಮುಖ ಆ ಕಡೆ ತಿರುಗಿಸಿಕೊಂಡೇ ಅಪ್ಪಾವ್ರು ಹೇಳಿದರು, 'ಮರೆತಿರಿ ಅಲ್ಲವೇ? ನೀವು ಇದನ್ನೆಲ್ಲಾ ಹೇಗೆ ಮರೆಯುತ್ತೀರಿ? ನನ್ನ ವಿಚಾರದಲ್ಲಿ ನಿಮಗೆಲ್ಲಾ ಅಷ್ಟರ ಮಟ್ಟಿಗೆ ಶ್ರದ್ಧೆ ಅಲ್ಲವೇ?'

ಅಪ್ಪಾವ್ರು ಚುಟ್ಟ ಎಳೆದು ಮಾತನಾಡುತ್ತಿದ್ದಾಗ ಹೊಗೆಯನ್ನು ಬಿಟ್ಟರು. ಆಕೆ ಮಾತನಾಡುತ್ತಿದ್ದಾಗ ಅವರು ಮಾತು ಮುಂದುವರೆಸಿದರು.

'ಚುಟ್ಟ ಮುಗಿಯುತ್ತಿದ್ದಾಗಲೇ ನಾನು ನೂರು ಸಲ ಹೇಳಿದೆ. ಆದರೆ ನೀನು ಅದನ್ನು ತರಿಸಿದೆಯಾ? ಬೆಳಿಗ್ಗೆ ಡಾಕ್ಟರ್ ಬಂದಾಗ ಒಂದು ಕೊಳೆಯಾದ ಮುಂಡನ್ನು ನನಗೆ ಕೊಟ್ಟೆ ಅಲ್ಲವೇ? ಇವೆಲ್ಲಾ ಮರೆತದ್ದೇನು? ನನಗೆಲ್ಲಾ ಅರ್ಥವಾಗುತ್ತಿದೆ.'

'ಡಾಕ್ಟರ್ ಅಷ್ಟು ಬೇಗ ಬರುತ್ತಾರೆಂದು ನಾನು ಅಂದುಕೊಳ್ಳಲಿಲ್ಲ. ಬರುವ ಹೊತ್ತಿಗೆ ಒಳ್ಳೆ ಮುಂಡು ತೆಗೆದು ಕೊಡೋಣ ಎಂದುಕೊಂಡಿದ್ದೆ. ಬೇಕೂಂತ ಯಾರಾದರೂ ಹಾಗೆ ಮಾಡುತ್ತಾರೇನು?' ತಲೆ ತಗ್ಗಿಸಿಕೊಂಡೇ ಆಕೆ ಮಾತನಾಡುತ್ತಿದ್ದಳು.

'ನೀವೆಲ್ಲಾ ಬೇಕೂಂತಲೇ ಮಾಡುತ್ತಿದ್ದೀರಿ. ನಾನು ಕೊಳೆಯಾಗಿರುವ ಮುಂಡು ಉಟ್ಟು ನಡೆದರೆ ನಿಮಗೇನು? ನಾನು ಟೀ ಕುಡಿಯುವುದು, ಚುಟ್ಟ ಸೇದುವುದು ನಿಲ್ಲಿಸಿದರೆ ನಿಮಗೆ ಲಾಭವೇ ಆಗುತ್ತಲ್ಲವೇ?'

'ಯಾಕೆ ಹೀಗೆಲ್ಲಾ ಮಾತನಾಡುತ್ತೀರಿ?' ಆಕೆಯ ಕಣ್ಣುಗಳು ಒದ್ದೆಯಾಗತೊಡಗಿದವು. ಆಕೆಯ ಮುಖದ ತುಂಬಾ ನರೆತ ತಲೆಗೂದಲು ಹರಡಿಕೊಂಡಿದ್ದವು. ತನ್ನ ದುಃಖವನ್ನು ಮನಸ್ಸಿನಲ್ಲೇ ಅಡಗಿಸಿ ಕೊಳ್ಳುತ್ತಿರುವಾಗ ಆಕೆಯ ಕಣ್ಣುಗಳಲ್ಲಿ ನೀರು ತುಂಬತೊಡಗಿತು.